**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 301/2019**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 23-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಎಸ್.ಎಲ್.ಜಿ 1, 3 ರಿಂದ 5 ನೇ ಪ್ರತಿವಾದಿಯರ ಪರ ವಕೀಲರಿಂದಃ**

1. ದಾವಾ ಅನುಸೂಚಿತ 1 ನೇ ಆಸ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಆಸ್ತಿಗಳು ಕೂಡ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುವರು. ದಾವಾ ಅನುಸೂಚಿತ 2 ರಿಂದ 8 ನೇ ಆಸ್ತಿಯನ್ನು ನನ್ನ ತಾತನು ಅವರ ಸ್ವಂತ ಸಂಪಾದನೆಯಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ.

2. ನನ್ನ ಮತ್ತು ನನ್ನ ತಂಗಿ ಮದುವೆಯನ್ನು ನನ್ನ ಚಿಕ್ಕಪ್ಪನವರೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಮತ್ತು ಸುಳ್ಳು ಎಂದು ನುಡಿಯುವರು. ನನ್ನ ತಾತ ಕೃಷ್ಣೇಗೌಡರಿಗೆ ಹೃದಯ ಸಂಬಂಧಿ ಖಾಯಿಲ ಇತ್ತು ಎಂದರೆ ಸರಿಯಲ್ಲ. ನನ್ನ ತಾತನ ಯೋಗಕ್ಷೇಮವನ್ನು ನನ್ನ ಚಿಕ್ಕಪ್ಪನಾದ 5 ನೇ ಪ್ರತಿವಾದಿಯೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

3. ನನ್ನ ಅಜ್ಜಿ ಈಗಲೂ ಬದುಕಿದ್ದಾರೆ. ಸದರಿಯವರು ಕೆಲಗೆರೆಯಲ್ಲಿ ಇದ್ದಾರೆ. ಸದರಿಯವರಿಗೆ ವಯಸ್ಸಾಗಿದ್ದು, 5 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ಅಂತ್ಯಕ್ರಿಯೆಯನ್ನು 5 ನೇ ಪ್ರತಿವಾದಿಯೇ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಕ್ಯಾನ್ಸರ್ ಖಾಯಿಲೆಯಿಂದ ತೀರಿಕೊಂಡಿದ್ದಾರೆ. ನನ್ನ ತಂದೆಯ

**ಅಸಲು ದಾವಾ ಸಂಖ್ಯೆ. 301/2019**
**ವಾ.ಸಾ-1**

ಯೋಗಕ್ಷೇಮವನ್ನು ಕೂಡ 5 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ನಮ್ಮ ಕುಟುಂಬದ ಹಾಗೂ ಹೋಗುಗಳನ್ನು ಮತ್ತು ನನ್ನ ತಂದೆ ಹಾಗೂ ತಾತನ ಯೋಗಕ್ಷೇಮವನ್ನು 5 ನೇ ಪ್ರತಿವಾದಿಯೇ ನೋಡಿಕೊಂಡಿದ್ದರಿಂದ, ನನ್ನ ತಂದೆ ಮತ್ತು ನನ್ನ ತಾತನು 5 ನೇ ಪ್ರತಿವಾದಿಯಿಂದ 5 ಲಕ್ಷ ರೂ ಹಣವನ್ನು ಪಡೆದು ದಿನಾಂಕ 30.07.2008 ರಂದು 5 ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮರಣ ಶಾಸನ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನದ ಆದಾರದ ಮೇಲೆ ದಾವಾ ಆಸ್ತಿಗಳ ಖಾತೆಯು 5 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 5 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿ ಉಳಿದಿಲ್ಲ ಎಂದರೆ ಸರಿಯಲ್ಲ.

5. ನನ್ನ ತಾತ ಮತ್ತು ನನ್ನ ತಂದೆಯು ದಾವಾ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ಮರಣ ಶಾಸನ ಮಾಡಿರುವುದರಿಂದ ಒಟ್ಟು ಕುಟುಂಬದ ಆಸ್ತಿಗಳಾಗಿ ಉಳಿದಿಲ್ಲ ಎಂದರೆ ಸರಿಯಲ್ಲ. ವಿಭಾಗ ಕೋರಿ ಊರಿನಲ್ಲಿ ಯಾವಾಗ ಪಂಚಾಯಿತಿ ಸೇರಿದ್ದೆವು ಎಂದು ನನಗೆ ಗೊತ್ತಿಲ್ಲ. ನಾವು ಪ್ರತಿವಾದಿಯರಿಂದ ಯಾವುದೇ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ.

6. 5 ನೇ ಪ್ರತಿವಾದಿಯು ಸರ್ಕಾರಿ ನೌಕರಿಯಲ್ಲಿದ್ದು ಅವರ ಸಂಪಾದನೆ ನಮ್ಮ ಕುಟುಂಬದ ಯೋಗಕ್ಷೇಮಕ್ಕೆ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ. **301/2019**
ವಾ.ಸಾ-**1**

ಉಳಿದ ಪ್ರತಿವಾದಿಯು ಗೈರು ಹಾಜರಿದ್ದು, ಮತ್ತು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಏನೂ ಇಲ್ಲವೆಂದು ಪರಿಗಣಿಸಲಾಯಿತು.

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.